# ವಿವೇಕಪ್ರಭ ಪತ್ರಿಕೆಗೆ ಹೊಸದಾಗಿ ಪೋಷಕ ಚಂದಾದಾರರಾದವರ ವಿವರ

| | | |
|---|---|---|
| ೧. | ಶ್ರೀ ರಮೇಶ್ ಬಾಳಿಗ ಬಿ. | ಬಂಟವಾಳ |
| ೨. | ಶ್ರೀ ಸ್ವಾಮಿ ಕೆ.ಎಸ್. | ಸಿದ್ದಾಪುರ |
| ೩. | ಪ್ರಾಂಶುಪಾಲರು, ಜೈಗೋಪಾಲ್ ಗರೋಡಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ | ಬೆಂಗಳೂರು |
| ೪. | ಶ್ರೀ ಭಟ್ ಜಿ. ಜಿ. | ಬೆಂಗಳೂರು |
| ೫. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಡಂಬಲಮತ್ತೂರು |
| ೬. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಹತ್ತಿಮತ್ತೂರ |
| ೭. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಹೆಸರೂರು |
| ೮. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಹಿರೇಮರಳಿಹಳ್ಳಿ |
| ೯. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಹುರಳಿಕುಪ್ಪಿ |
| ೧೦. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಹೂವಿನಶೀಗ್ಲಿ |
| ೧೧. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಇಚ್ಚಂಗಿ |
| ೧೨. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಜಿಲ್ಲಾಪುರ |
| ೧೩. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಕಡಕೋಳ |
| ೧೪. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಕಾರಡಗಿ |
| ೧೫. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಕುಣಿಮೆಳ್ಳಿಹಳ್ಳಿ |
| ೧೬. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಕುರುಬರಮಲ್ಲೂರು |
| ೧೭. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಮಂತ್ರೋಡಿ |
| ೧೮. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಶಿರಬಡಗಿ |
| ೧೯. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ತೆಗ್ಗಿಹಳ್ಳಿ |
| ೨೦. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ತವರಮೆಳ್ಳಿಹಳ್ಳಿ |
| ೨೧. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಯಳವಿಗಿ |
| ೨೨. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ನೇಶ್ವಿ |
| ೨೩. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ತಾವರಗಿ |
| ೨೪. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಅಣಜಿ |
| ೨೫. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಬೇಟಕೆರೂರು |
| ೨೬. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಭೋಗಾವಿ |
| ೨೭. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಬುಡೀಕಟ್ಟಿ |
| ೨೮. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಚಿಕ್ಕೇರೂರು |
| ೨೯. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಚಿಕ್ಕೊಣತಿ |
| ೩೦. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಹಂಸಭಾವಿ |
| ೩೧. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಹಿರೇಕಬ್ಬಾರ |
| ೩೨. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಹಿರೇಮೊರಬ |
| ೩೩. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಹುಲ್ಲತ್ತಿ |
| ೩೪. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಇಂಗಳಗೊಂದಿ |
| ೩೫. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಕುಂಚೂರು |
| ೩೬. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಕಡೂರ |
| ೩೭. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಕೋಡಮಗ್ಗಿ |
| ೩೮. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಕುಡಪಲಿ |
| ೩೯. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಮೇದೂರು |
| ೪೦. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಅಬಲೂರ |
| ೪೧. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ನಿಡನೇಗಿಲು |
| ೪೨. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಸಾತೇನಹಳ್ಳಿ |
| ೪೩. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಎತ್ತಿನಹಳ್ಳಿ ಎಂ ಕೆ |
| ೪೪. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಹಳ್ಳೂರು |
| ೪೫. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಕಣವೀಸಿದ್ಧಗೇರಿ |
| ೪೬. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಮಡ್ಲೂರ |
| ೪೭. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಮಾಸೂರು |
| ೪೮. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ನಾಗವಂದ |
| ೪೯. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ರಟ್ಟೆಹಳ್ಳಿ |
| ೫೦. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ತಡಕನಹಳ್ಳಿ |
| ೫೧. | ಅಧ್ಯಕ್ಷರು, ಗ್ರಾಮ ಪಂಚಾಯಿತಿ | ಕಳಸೂರು |
| ೫೨. | ಶ್ರೀ ಅಭಿಷೇಕ್ ಆರ್ | ಮೈಸೂರು |



**‘‘ಅತ್ಯಂತ ದುರಾಚಾರಿ ಯಾಗಿದ್ದವನೂ ಕೂಡ ಒಂದೇ ಮನಸ್ಸಿನ ಭಕ್ತಿಯಿಂದ ನನ್ನನ್ನು ಭಜಿಸಿದರೆ, ಅವನನ್ನು ಸಾಧುವೆಂದೇ ತಿಳಿಯಬೇಕು. ಏಕೆಂದರೆ ಅವನು ನಿಶ್ಚಯ ಬುದ್ಧಿಯಿಂದ ಸರಿಯಾದ ಸಂಕಲ್ಪವನ್ನೇ ಮಾಡಿದ್ದಾನೆ.’’**

*-ಶ್ರೀಕೃಷ್ಣ*

## ಓದುಗರ ಪತ್ರ

ಮಾನ್ಯರೇ, ‘ಪಂಚಕೇದಾರ ಯಾತ್ರೆ’ ಲೇಖನದಲ್ಲಿ **‘ಬುಗ್ಯಾಲ್’** ಎಂಬ ಪದ ಪ್ರಯೋಗವಿದೆ. ಬುಗ್ಯಾಲ್ ಎಂದರೇನು?

–ಗುರುಮೂರ್ತಿ ಪೆಂಡಕೂರು

(ಇದು ಉತ್ತರಾಖಂಡದಲ್ಲಿ ಪ್ರಚಲಿತವಿರುವ ಪದ. ಪರ್ವತದ ತುದಿಯಲ್ಲಿ ಮರಗಳಿಲ್ಲದ, ಹಸಿರುಹುಲ್ಲು ಮಾತ್ರ ಹಬ್ಬಿರುವ ಖಾಲಿ ಜಾಗಗಳಿರುತ್ತವೆ. ಅದಕ್ಕೆ ‘ಬುಗ್ಯಾಲ್’ ಎನ್ನುತ್ತಾರೆ. **‘ವಿವೇಕಪ್ರಭ’** ಏಪ್ರಿಲ್ ತಿಂಗಳ ಸಂಚಿಕೆ, ಪು.೨೮ ರಲ್ಲಿ ಈ ಲೇಖನ ಸರಣಿಯ ಮೊದಲನೆಯ ಕಂತಿನಲ್ಲಿ ಇದರ ವಿವರಣೆ ಕೊಡಲಾಗಿತ್ತು. –ಸಂ)



# ‘ಅಪಿ ಚೇತ್ಸುದುರಾಚಾರೋ..’

ಮೀನಾ ವಿ.

ಶ್ರೀರಾಮಕೃಷ್ಣರ ಸಂಪರ್ಕಕ್ಕೆ ಬಂದವರಲ್ಲಿ ಶ್ರೇಷ್ಠ ಸಂನ್ಯಾಸಿಗಳೂ, ಭಕ್ತರೂ, ವಿದ್ವಾಂಸರೂ, ಅಧಿಕಾರಿಗಳೂ ಸೇರಿದ್ದರು; ಅಂತೆಯೇ ಜನಸಾಮಾನ್ಯರೂ, ಕೆಳವರ್ಗದವರೂ, ದೀನದಲಿತರೂ ಇದ್ದರು. ಅವರಿಂದ ಪರಿವರ್ತಿತರಾದವರಲ್ಲಿ ಡಕಾಯಿತರೂ ಇದ್ದರೆಂಬ ವಿಷಯವನ್ನು ಈ ಲೇಖನ ತಿಳಿಸಿಕೊಡುತ್ತದೆ. ಲೇಖಕರು ಬೆಂಗಳೂರು ರಾಮಕೃಷ್ಣ ಮಠದ ಭಕ್ತರು.

ಭಗವದ್ಗೀತೆಯ **‘ರಾಜವಿದ್ಯಾ ರಾಜಗುಹ್ಯ ಯೋಗ’**ದ ೩೦ನೇ ಶ್ಲೋಕ ಹೀಗೆ ಹೇಳುತ್ತದೆ: ‘ಒಂದು ವೇಳೆ ಯಾರಾದರೂ ಅತ್ಯಂತ ದುರಾಚಾರಿಯಾಗಿದ್ದರೂ ಸಹ ಅನನ್ಯ ಭಾವದಿಂದ ನನ್ನ ಭಕ್ತನಾಗಿ ನನ್ನನ್ನು ನಿರಂತರ ಭಜಿಸುತ್ತಾನೋ ಅವನನ್ನು ಸಾಧುವೆಂದೇ ಪರಿಗಣಿಸಬೇಕು. ಏಕೆಂದರೆ ಅವನು ಯಥಾರ್ಥವಾದ ನಿಶ್ಚಿತ ಬುದ್ಧಿಯುಳ್ಳವಾಗಿದ್ದಾನೆ.’ ಅರ್ಥಾತ್ ಪರಮೇಶ್ವರನ ಭಜನೆಗೆ ಸಮಾನವಾದುದು ಬೇರೆಯಿಲ್ಲವೆಂದು ಅವನು ದೃಢ ನಿಶ್ಚಯ ಮಾಡಿಕೊಂಡಿರುತ್ತಾನೆ. ಮುಂದಿನ ೩೧ನೇ ಶ್ಲೋಕ ಹೇಳುತ್ತದೆ, ‘ಅಂತಹವನು ಬೇಗನೆ ಧರ್ಮಾತ್ಮನಾಗುತ್ತಾನೆ ಹಾಗೂ ಶಾಶ್ವತ ಶಾಂತಿಯನ್ನು ಪಡೆಯುತ್ತಾನೆ. ನನ್ನ ಭಕ್ತನು ಎಂದಿಗೂ ನಾಶವಾಗುವುದಿಲ್ಲವೆಂಬ ದೃಢ ನಿಶ್ಚಯವನ್ನು ತಿಳಿದುಕೋ.’

ಭಗವಂತನ ಅವತಾರವಾದಾಗಲೆಲ್ಲ, ಉದಾಹರಣೆಗೆ ಶ್ರೀರಾಮಚಂದ್ರ ಪ್ರಭುವಾಗಿ, ಶ್ರೀಕೃಷ್ಣ ಪರಮಾತ್ಮನಾಗಿ ಭಗವಂತ ಅವತರಿಸಿದಾಗ ಅವರ ಜೀವನದಲ್ಲಿ ಅನೇಕ ಘಟನೆಗಳು ಈ ಸತ್ಯವನ್ನು ಪ್ರಮಾಣೀಕರಿಸುತ್ತವೆ. ಅಂತೆಯೇ ಭಗವಾನ್ ಶ್ರೀ ರಾಮಕೃಷ್ಣರ ಅವತಾರದಲ್ಲೂ ಅನೇಕ ಘಟನೆಗಳು ಇದನ್ನು ಎತ್ತಿಹಿಡಿದಿವೆ. ಆದರೆ ಆಶ್ಚರ್ಯದ ವಿಚಾರವೆಂದರೆ ಈ ಬಾರಿ ಕೋದಂಡ, ಸುದರ್ಶನ ಚಕ್ರವಿಲ್ಲದೆಯೇ, ಕೇವಲ ದಿವ್ಯಪ್ರೇಮವೆಂಬ ಒಂದೇ ಅಸ್ತ್ರ ದಿಂದ ಇದೆಲ್ಲವನ್ನೂ ಅವರು ಸಾಧಿಸಿರುವ ಕಾರಣದಿಂದಲೇ ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರನ್ನು ‘ಅವತಾರ ವರಿಷ್ಠ’ ರೆಂದು ಸ್ತುತಿಸಿದ್ದಾರೇನೊ!

ದಕ್ಷಿಣೇಶ್ವರ ಸ್ಟೇಷನ್ನಿಗೆ ಸೇರಿದಂತೆ ಇದ್ದ ವಿಸ್ತೀರ್ಣವಾದ ಜಾಗವನ್ನು ಕೋಸಾಲ್‌ಪುರ ಬಯಲೆಂದೇ ಕರೆಯಲಾಗುತ್ತಿತ್ತು. ಈ ಸ್ಥಳದಲ್ಲೆಲ್ಲಾ ಕಳ್ಳರ, ಡಕಾಯಿತರ ಬಹಳವಾದ ಉಪದ್ರವವಿತ್ತು. ಶ್ರೀರಾಮಕೃಷ್ಣರ ಕಾಲದಲ್ಲಿ ಆಲಂಬಜಾರ್ ಸಂದಿಯಿಂದ ಹಿಡಿದು ದಕ್ಷಿಣೇಶ್ವರ – ಅರಿಯಾದಹಾ ಜನರು ಸಾಯಂಕಾಲ ಏಳು ಗಂಟೆಯ ಬಳಿಕ ಒಂಟಿಯಾಗಿ ಬರಲು ಹೆದರುತ್ತಿದ್ದರು, ಡಕಾಯಿತರ ಭಯದಿಂದಾಗಿ. ಅದರೆ ಶ್ರೀರಾಮಕೃಷ್ಣರ ವಿಸ್ಮಯಕರ ಪ್ರಭಾವ ಈ ಸಮಸ್ತ ಡಕಾಯಿತರ ಮೇಲೆಯೂ ಬಿದ್ದಿತು. ಅಂತಹ ಒಂದು ಹೃದಯಸ್ಪರ್ಶಿಯಾದ ಇತಿಹಾಸವನ್ನು ನಮಗೆ ಶ್ರೀರಾಮಕೃಷ್ಣರ ಪ್ರತ್ಯಕ್ಷದರ್ಶಿಗಳಾದ ಶಶಿಭೂಷಣ ಸಾಮಂತರು ಉಪಾಹಾರವಾಗಿ ನೀಡಿದ್ದಾರೆ. ಈಗ ನಾವು ಅದನ್ನು ಅವರ ಸ್ವಂತ ಬರವಣಿಗೆಯಿಂದಲೇ ಅವಲೋಕಿಸೋಣ.

ದಕ್ಷಿಣೇಶ್ವರದ ಬಳಿಯೇ ಇತ್ತು ಕೋಸಾಲ್‌ಪುರ ಬಯಲು. ಒಮ್ಮೆ ಶ್ರೀರಾಮಕೃಷ್ಣ ದೇವರು ಬಾಗಬಜಾರಿನಿಂದ ದಕ್ಷಿಣೇಶ್ವರಕ್ಕೆ ವಾಪಸ್ಸಾಗುತ್ತಿದ್ದಾಗ ಈ ಬಯಲಿನಲ್ಲಿ ಡಕಾಯಿತರಿಂದ ಪೀಡಿಸಲ್ಪಟ್ಟರು. ಅವರೆಲ್ಲರೂ ಚೆನ್ನಾಗಿ ಮದ್ಯ ಸೇವಿಸಿದ್ದರು ಹಾಗೂ ಕೈಯಲ್ಲಿ ತಿಂಡಿಗಳನ್ನು ಇಟ್ಟುಕೊಂಡಿದ್ದರು. ಇದರೊಂದಿಗೆ ಮಚ್ಚು, ಗುದ್ದಲಿ, ಮತ್ತಿತರ ಆಯುಧಗಳನ್ನೂ ಹಿಡಿದಿದ್ದರು. ಶ್ರೀರಾಮಕೃಷ್ಣರೊಂದಿಗೆ ಹೃದಯರಾಮನಿದ್ದ. ಆ ಡಕಾಯಿತರ ಗುಂಪು ಶ್ರೀರಾಮಕೃಷ್ಣರಿದ್ದ ಗಾಡಿಯನ್ನು ನನಹುಗಲಿ ಬಳಿ ಅಡ್ಡಗಟ್ಟಿತು. ಅವರೆಲ್ಲಾ ಡಕಾಯಿತರೆಂದು ಅರಿತ ಹೃದಯ ಮುಖ್ಯೋಪಾಧ್ಯಾಯ

ಜೋರಾಗಿ ಕೂಗಲು ಪ್ರಯತ್ನಿಸಿದ. ತಕ್ಷಣ ಡಕಾಯಿತರು ಆತನನ್ನು ಬೆದರಿಸಿ ಆತನ ತಲೆಯ ಮೇಲೆ ಮಚ್ಚನ್ನು ಇಟ್ಟರು. ತಮ್ಮೆದುರಿಗೇ ಭಯಂಕರವಾದ ಸರ್ವನಾಶವನ್ನು ಕಂಡು ರಾಮಕೃಷ್ಣರು ಅವರನ್ನೆಲ್ಲಾ ತಡೆದು, ಇಂತಹ ಕಾರ್ಯವನ್ನು ಮಾಡಬಾರದೆಂದು ಹೇಳಿ ಅವರನ್ನು ಬಹುವಾಗಿ ಸಮಾಧಾನಗೊಳಿಸುತ್ತಾ, ''ಅಪ್ಪಾ! ನೀವೇನನ್ನು ಮಾಡುತ್ತಿದ್ದೀರಿ? ನಿಮಗೆ ಏನು ಬೇಕಾಗಿದೆ ಹೇಳಿ. ರಕ್ತದ ಹೊಯ್ದಾಟದಿಂದ ಏನು ಪ್ರಯೋಜನ?'' ಎಂದರು.

ಡಕಾಯಿತರು ಹುಂಕಾರ ಮಾಡಿ, ''ನಿಮ್ಮ ಬಳಿ ಇರುವ ಹಣವನ್ನೆಲ್ಲಾ ನಮಗೆ ಕೊಡಿ. ಇಲ್ಲದಿದ್ದಲ್ಲಿ ನಿಮ್ಮ ಜೀವ ತೆಗೆಯುತ್ತೇವೆ, ಖಂಡಿತ'' ಎಂದರು.

ಅತ್ಯಂತ ವಿನಯದಿಂದ ಶ್ರೀರಾಮಕೃಷ್ಣರು ''ಅಪ್ಪಾ ನಿಮ್ಮ ಕೈಗಳನ್ನು ಹಿಡಿದುಕೊಳ್ಳುವೆ. ನಿಮಗೆ ಎಷ್ಟು ಹಣ ಬೇಕು ಹೇಳಿ. ಈಗ ನಮ್ಮ ಬಳಿ ಹೆಚ್ಚೇನೂ ಹಣವಿಲ್ಲ; ಕೇವಲ ಗಾಡಿಬಾಡಿಗೆಗೆ ಬೇಕಾದ ಹಣವನ್ನು ಅವರು ಕೊಟ್ಟಿದ್ದಾರೆ. ಆದರೆ ನಿಮಗೆ ಎಷ್ಟು ಹಣ ಬೇಕೋ ಅಷ್ಟೂ ಹಣವನ್ನು ನಾನು ಕೊಡುವೆ, ಆದರೆ ನೀವೊಂದು ಕೆಲಸ ಮಾಡಬೇಕು'' ಎಂದರು.

ಡಕಾಯಿತರು ಹೂಂಕಾರ ಧ್ವನಿಯಿಂದ, ''ಏನು ಮಾಡಬೇಕೋ ಮೂರ್ಖ!'' ಎಂದರು. ಶ್ರೀರಾಮಕೃಷ್ಣರು ಹೇಳಿದರು ''ಅಪ್ಪಾ ನೀವೆಲ್ಲಾ ಒಮ್ಮೆ ದಕ್ಷಿಣೇಶ್ವರ ಕಾಳೀದೇವಾಲಯಕ್ಕೆ ಬರಬೇಕು. ನಾನು ಅಲ್ಲೇ ವಾಸ ಮಾಡುತ್ತಿರುವೆ; ನಾನು ಚಿಕ್ಕ ಬಾಬುವಿಗೆ (ಮಥುರನಾಥ ವಿಶ್ವಾಸ) ಹೇಳಿ ನಿಮಗೆ ಬಕ್ಷೀಸ್ ಕೊಡಿಸುವೆ'' ಎಂದರು. ಡಕಾಯಿತರು ಕೋಪಗೊಂಡು ಅದಕ್ಕೆ ಸಮ್ಮತಿಸದೆ, ''ಏನಯ್ಯಾ ಮೂರ್ಖ, ಈ ಒಂದು ನೆವದಿಂದ ನೀನು ನಮ್ಮನ್ನು ಪೋಲಿಸರಿಗೆ ಹಿಡಿದುಕೊಡಲು ಯೋಚಿಸಿರುವೆಯಾ? ನಾವೇನೂ ಅಂತಹ ಮೂರ್ಖರಲ್ಲ'' ಎಂದರು.

ಶ್ರೀರಾಮಕೃಷ್ಣರು ಅವರಿಗೆ ಬಹುವಾಗಿ ಬುದ್ಧಿ ಹೇಳಿ, ''ನೋಡಿ, ಚೈತ್ರಮಾಸದಲ್ಲಿ ಶಿವನ ಪೂಜೆಗಾಗಿ ಅಲಂಕರಿಸಿಕೊಂಡವರಂತೆ ವೇಷ ಮರೆಮಾಚಿಕೊಂಡು ಬನ್ನಿ. ನಾನು ಆಗ ನಿಮ್ಮನ್ನು ಚೆನ್ನಾಗಿ ಗುರ್ತು ಹಿಡಿಯುವೆ. ತಕ್ಷಣ ನಿಮಗೆ ಸಲ್ಲಬೇಕಾದ ವಸ್ತುವನ್ನು ಕೊಟ್ಟುಬಿಡುವೆ. ನಿಮಗೆ ಹಣ ಬೇಕಾದರೆ ಹಣ, ಚಿನ್ನ ಬೇಕಾದರೆ ಚಿನ್ನ – ನೀವು ಏನನ್ನು ಬಯಸುವಿರೋ ಅದನ್ನೇ ಪಡೆಯುವಿರಿ'' ಎಂದರು.

ಡಕಾಯಿತರು ಹೇಳಿದರು, ''ನೋಡಿಕೋ, ಮಾತನ್ನು ಏನಾದರೂ ಬದಲಾಯಿಸಿದರೆ ನಿಮ್ಮನ್ನು ಒಮ್ಮೆಲೇ ಮುಗಿಸಿ ಬಿಡುತ್ತೇವೆ'' ಎಂದರು. ಅವರನ್ನು ಬಹುವಾಗಿ ಸಮಾಧಾನಗೊಳಿಸಿ ಶ್ರೀರಾಮಕೃಷ್ಣರು, ''ಹಾಗೇ ಆಗಲಪ್ಪಾ'' ಎಂದರು.

ಡಕಾಯಿತರು ಅಲ್ಲಿಂದ ಹೋದರು. ಶ್ರೀರಾಮಕೃಷ್ಣರು ಹೃದಯರಾಮನೊಂದಿಗೆ ಅಂದಿನ ಯಾತ್ರೆಯಿಂದ ಬಿಡುಗಡೆ ಹೊಂದಿ ಹೊರಬಂದರು. ಹಿಂದೆ ಮಾತಾಡಿಕೊಂಡಿದ್ದಂತೆ ಒಂದು ದಿನ ಡಕಾಯಿತರ ಸರ್ದಾರ ಕಾಳೀದೇವಾಲಯಕ್ಕೆ ಬಂದೇಬಿಟ್ಟ. 



ಶ್ರೀರಾಮಕೃಷ್ಣರು ಆತನ ಪಕ್ಕದಲ್ಲೇ ನಿಂತಿದ್ದರೂ, ಅವರನ್ನು ಆತ ಗುರುತಿಸಲಾರದೆ ಹೋದ. ಆದರೆ ಶ್ರೀರಾಮಕೃಷ್ಣರು ಆತನನ್ನು ಗುರುತುಹಿಡಿದು, ''ಅರೆ, ಅತ್ತ ಕಡೆಗೆ ಹೋಗಬೇಡ, ನೀನು ಯಾರನ್ನು ಹುಡುಕುತ್ತಿರುವೆಯೋ ಆತ ಇಲ್ಲೇ ಇದ್ದಾನೆ'' ಎಂದರು. ಆಗ ಸರ್ದಾರನಿಗೆ ಅರ್ಥವಾಯಿತು, ಇವರನ್ನೇ ತಾನು ಹುಡುಕುತ್ತಿರುವುದು ಎಂದು. ಯಾರನ್ನು ತಾವು ದಾರಿಯಲ್ಲಿ ಅಡ್ಡಗಟ್ಟಿದ್ದರೋ ಅವರೇ ಇವರು ಎಂದರಿತು ಅವನು ಶ್ರೀರಾಮಕೃಷ್ಣರನ್ನು ಅನುಸರಿಸಿದ. ಕಡೆಗೆ ಅವರು ಶ್ರೀರಾಮಕೃಷ್ಣರ ಕೋಣೆಗೆ ಬಂದರು. ಶ್ರೀರಾಮಕೃಷ್ಣರು ಅವನಿಗೆ ಕುಳಿತುಕೊಳ್ಳಲು ಆಸನ ನೀಡಿದರು. ಸರ್ದಾರನು ಭಯದಿಂದ ನಾಲ್ಕೂ ಕಡೆಗೂ ನೋಡಿದ, ಶ್ರೀರಾಮಕೃಷ್ಣರೇನಾದರೂ ತನ್ನನ್ನು ಸಿಪಾಯಿಗಳ ಕೈಗೆ ಹಿಡಿದು ಕೊಡುವರೇ ಎಂದು! ಅವನಿಗೆ ಅಭಯ ನೀಡುತ್ತಾ ಶ್ರೀರಾಮಕೃಷ್ಣರು ಹೇಳಿದರು, ''ಅಪ್ಪಾ, ಚಿಂತೆ ಬಿಡು, ಇಲ್ಲಿಗೆ ಬಂದು ಸೇರಿದೆಯಲ್ಲಾ! ಇನ್ನು ಯಾವ ಭಯವೂ ಬೇಡ'' ಎಂದರು. ''ಅದಿರಲಿ, ದೇವಸ್ಥಾನ ನಿನಗೆ ಹೇಗೆ ಕಂಡಿತು?''ಎಂದು ಅವರು ಮತ್ತೆ ಕೇಳಿ ದರು. ಸರ್ದಾರನ ಮನಸ್ಸು ಚಂಚಲಗೊಂಡಿತ್ತು. ಆತ, '' ಬೇಗನೆ ಮಾಡಬೇಕಾದ ಕಾರ್ಯ ಮಾಡಿ ಮುಗಿಸು'' ಎಂದನು. ಶ್ರೀರಾಮಕೃಷ್ಣರು, ''ಖಂಡಿತ ಆಗುತ್ತದೆ. ಅದು ಆಗಿಯೇ ತೀರುತ್ತದೆ. ಅದಕ್ಕೆ ಮುನ್ನ ಶ್ರೀಭವತಾರಿಣೀ ದೇವಿಯ ಪ್ರಸಾದವನ್ನು ಸ್ವೀಕರಿಸು'' ಎಂದು ಹೇಳಿ ತಮ್ಮಲ್ಲಿದ್ದ ಹಣ್ಣು, ಹಾಲು, ಮಿಠಾಯಿ ಮುಂತಾದವನ್ನು ತಟ್ಟೆಯಲ್ಲಿ ಹಾಕಿಕೊಟ್ಟು, ತಿನ್ನಲು ಹೇಳಿದರು. ಸರ್ದಾರ ಪ್ರಸಾದವನ್ನೆಲ್ಲ ತನ್ನ ಬಟ್ಟೆಯ ಅಂಚಿಗೆ ಹಾಕಿ, ಗಂಟು ಕಟ್ಟಿಕೊಂಡ. ಅಷ್ಟು ಹೊತ್ತಿಗೆ ಎಲ್ಲಿಂದಲೋ ಹೃದಯರಾಮ ಅಲ್ಲಿಗೆ ಬಂದ. ಇದನ್ನು ಕಂಡ ಸರ್ದಾರ ಯಾವ ಮಾತನ್ನೂ ಆಡದೆ ಕೋಣೆಯಿಂದ ತ್ವರಿತವಾಗಿ ಹೊರಬಂದು, ಅಲ್ಲಿಂದ ಹೊರಟುಹೋದ. ಅವನನ್ನೇ ಅನುಸರಿಸುತ್ತಾ ಶ್ರೀರಾಮಕೃಷ್ಣರು, ''ಏನಪ್ಪಾ, ನಿನಗೆ ಕೊಡ